# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 20 |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 13.02.2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಮೂಲಗಳೆಷ್ಟು; ಅವು ಯಾವುವು; ಈ ಮೂಲಗಳಿಂದ ಎಷ್ಟು ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿದೆ;</td><td>ಕಲಬುರಗಿ ನಗರಕ್ಕೆ 2 ಮೂಲಗಳಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಮೂಲಗಳ ಮತ್ತು ಪ್ರಮಾಣದ ವಿವರಗಳು ಈ ಕೆಳಗಿನಂತಿವೆ;<br><table><tr><th>ನೀರಿನ ಮೂಲಗಳು</th><th>ಲಭ್ಯತೆ ಪ್ರಮಾಣ (ಎಂ.ಎಲ್.ಡಿ)</th></tr><tr><td>ಭೀಮಾ ನದಿ</td><td>60.00</td></tr><tr><td>ಬೆಣ್ಣೆತೋರಾ ನದಿ</td><td>22.00</td></tr><tr><td>ಒಟ್ಟು</td><td>82.00</td></tr></table></td></tr>
<tr><td>ಆ)</td><td>ನಗರದಲ್ಲಿ ಕುಡಿಯುವ ನೀರಿನ ಬೇಡಿಕೆ ಎಷ್ಟು : ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು</td><td>ನಗರಕ್ಕೆ ಸುಮಾರು 108.68 ಎಂ.ಎಲ್.ಡಿ ಯಷ್ಟು ಕುಡಿಯುವ ನೀರಿನ ಬೇಡಿಕೆ ಇರುತ್ತದೆ.<br>• ನಗರದ ಕುಡಿಯುವ ನೀರಿನ ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕೆಯುಡಬ್ಲ್ಯೂಎಸ್ಎಂಪಿ)ಯಡಿ ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿ ಪ್ರದೇಶಗಳಿಗೆ ಹಾಲಿ ಪೂರೈಕೆಯಾಗುತ್ತಿರುವ 82 ಎಂ.ಎಲ್.ಡಿ ನೀರು ಸರಬರಾಜು ವ್ಯವಸ್ಥೆಯ ಜೊತೆಗೆ ಬೆಣ್ಣೆತೋರ ಜಲಾಶಯದಿಂದ ಪ್ರತಿದಿನ 58.77 ಎಂ.ಎಲ್.ಡಿ ಶುದ್ಧೀಕರಿಸಿದ ನೀರನ್ನು ನಗರಕ್ಕೆ ಪೂರೈಸಲು ಯೋಜಿಸಲಾಗಿದೆ.<br>• ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ-ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24x7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತ್ತೀಕರಣ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ನಅಇ 279 ಪಿ.ಆರ್.ಜೆ 2018 ದಿನಾಂಕ:22.10.2018 ರಂತೆ ಅನುಷ್ಠಾನಗೊಳಿಸಲಾಗುತ್ತಿದೆ.</td></tr>
<tr><td>ಇ)</td><td>ಕಲಬುರಗಿ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕಾಮಗಾರಿ ಗುತ್ತಿಗೆ ಪಡೆದ ಕಂಪನಿ ಎಲ್&ಟಿ ಯವರಿಗೆ ಟೆಂಡರ್ ನೀಡಲಾದ ಮೊತ್ತ ಎಷ್ಟು ;</td><td>ಕಲಬುರಗಿ ನಗರಕ್ಕೆ ವಿಶ್ವಬ್ಯಾಂಕ್ ನೆರವಿನ ಕುಡಿಯುವ ನೀರು ಸರಬರಾಜು ಯೋಜನೆಯ ಗುತ್ತಿಗೆಯನ್ನು ಮೆ|| ಎಲ್&ಟಿ ಲಿಮಿಟೆಡ್ ಚೆನ್ನೈ ರವರಿಗೆ ದಿನಾಂಕ:10-06-2020 ರಲ್ಲಿ ರೂ. 837.43 ಕೋಟಿಗಳಿಗೆ ನೀಡಲಾಗಿದೆ. ಇದರಲ್ಲಿ ವಿನ್ಯಾಸ-ನಿರ್ಮಾಣ ಕಾಮಗಾರಿಗೆ ರೂ.604.95 ಕೋಟಿಗಳು (ಕೆಪೆಕ್ಸ್) ಮತ್ತು 12 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ರೂ.232.48 ಕೋಟಿಗಳು (ಒಪೆಕ್ಸ್) ಒಳಗೊಂಡಿರುತ್ತದೆ.</td></tr>
</table>

| | | |
|---|---|---|
| ಈ) | ಸದರಿ ಮೊತ್ತವನ್ನು ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ಹಣ ಪಡೆಯಲಾಗಿದೆ ; | ಗುತ್ತಿಗೆ ಮೊತ್ತ ರೂ.837.43 ಕೋಟಿಗಳಲ್ಲಿ ಯೋಜನೆಯ ನಿರ್ಮಾಣ ಕಾಮಗಾರಿಗೆ ರೂ.604.95 ಕೋಟಿಗಳಾಗಿರುತ್ತದೆ.<br><br>ಸದರಿ ಮೊತ್ತವನ್ನು ಈ ಕೆಳಕಂಡ ಮೂಲಗಳಿಂದ ಪಡೆಯಲಾಗಿರುತ್ತದೆ.<br><br>ವಿಶ್ವಬ್ಯಾಂಕ್ ನೆರವು 67% — ರೂ 405.32 ಕೋಟಿ<br>ಮಹಾನಗರ ಪಾಲಿಕೆ ಪಾಲು 27% — ರೂ.163.34 ಕೋಟಿ<br>ರಾಜ್ಯ ಸರ್ಕಾರದ ಪಾಲು 6% — ರೂ. 36.29 ಕೋಟಿ<br>ಕಾರ್ಯಾಚರಣೆ ಮತ್ತು ನಿರ್ವಹಣೆ ಮಹಾನಗರ ಪಾಲಿಕೆವತಿಯಿಂದ — ರೂ.232.48 ಕೋಟಿ<br>**ಒಟ್ಟು ಮೊತ್ತ — ರೂ.837.43 ಕೋಟಿ** |
| ಉ) | ಮೆ\|\| ಎಲ್&ಟಿ ಕಂಪನಿಯವರಿಗೆ ನಗರದ ಕುಡಿಯುವ ನೀರಿನ ಕಾಮಗಾರಿ ಗುತ್ತಿಗೆ ನೀಡುವುದಕ್ಕೂ ಮೊದಲು ಕಲಬುರಗಿ ನಗರದ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ನಿರ್ವಹಿಸಿದ ಪ್ರಾಧಿಕಾರಗಳು ಯಾವುವು ; | ಮೆ\|\| ಎಲ್&ಟಿ ಕಂಪನಿಯವರಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಹಸ್ತಾಂತರಿಸಿಕೊಳ್ಳುವ ಮೊದಲು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವತಿಯಿಂದ ನಿರ್ವಹಿಸಲಾಗುತ್ತಿತ್ತು. |
| ಊ) | ಸದರಿ ಕಂಪನಿಗೆ ಟೆಂಡರ್ ನೀಡುವಾಗ ವಿಧಿಸಲಾದ ಷರತ್ತುಗಳೇನು ಮತ್ತು ಯೋಜನೆಯನ್ನು ಯಾವ ಕಾಲಾವಧಿಯೊಳಗೆ ಪೂರ್ಣಗೊಳಿಸುವ ಷರತ್ತಿಗೊಳಪಟ್ಟು ಗುತ್ತಿಗೆ ನೀಡಲಾಗಿದೆ ; | ಗುತ್ತಿಗೆ ಕರಾರಿನಂತೆ ಗುತ್ತಿಗೆದಾರರು ಐದು ವರ್ಷಗಳಲ್ಲಿ ಅಂದರೆ ದಿನಾಂಕ:09.06.2025 ನಿರ್ಮಾಣ ಕಾಮಗಾರಿಯನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ತದನಂತರ ಏಳು ವರ್ಷ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ದಿನಾಂಕ:09.06.2032 ರವರೆಗೆ ನಿರ್ವಹಿಸಬೇಕಾಗಿದೆ. ವಿವರಗಳು ಈ ಕೆಳಕಂಡಂತಿದೆ.<br>• 6 ತಿಂಗಳು ಸಮೀಕ್ಷೆ ಮತ್ತು ವಿನ್ಯಾಸ ಅಂತಿಮಗೊಳಿಸುವುದು.<br>• 4.5 ವರ್ಷಗಳು ಪ್ರಸ್ತುತ ಚಾಲ್ತಿಯಲ್ಲಿರುವ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಒಳಗೊಂಡಂತೆ ಯೋಜನೆಯನ್ನು ಅನುಷ್ಠಾನಗೊಳಿಸುವುದು.<br><br>7 ವರ್ಷಗಳು ಸುಸ್ಥಿರ ಅವಧಿ (ಕಾರ್ಯಾಚರಣೆ &ನಿರ್ವಹಣೆ) ಜೂನ್-2025-ಜೂನ್-2032 |
| ಋ) | ಮೆ\|\| ಎಲ್&ಟಿ ಕಂಪನಿಯವರು ಟೆಂಡರ್ ನಲ್ಲಿ ವಿಧಿಸಿರುವ ಷರತ್ತಿನಂತೆ ಕಾಮಗಾರಿ ನಿರ್ವಹಿಸಿರುತ್ತಾರೆಯೇ ; ಇಲ್ಲದಿದ್ದಲ್ಲಿ, ಮಹಾನಗರ ಪಾಲಿಕೆ ಅಥವಾ ಸರ್ಕಾರದಿಂದ ಕಂಪನಿಯವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ; | ಮೆ\|\| ಎಲ್ & ಟಿ ಕಂಪನಿ ರವರು ಮಂದಗತಿಯಲ್ಲಿ ಕಾಮಗಾರಿ ನಿರ್ವಹಿಸುತ್ತಿರುವುದರಿಂದ ರೂ.25.92 ಕೋಟಿ ದಂಡ (Liquidity Damage)ವಿಧಿಸಲಾಗಿದೆ. |

| | | |
|---|---|---|
| ಎ) | ಈ ಕಾಮಗಾರಿ ಸಂಬಂಧ ಮೆ|| ಎಲ್&ಟಿ ಕಂಪನಿಯವರಿಗೆ ಪಾವತಿಸಲಾದ ಹಣ ಎಷ್ಟು; ಮತ್ತು ಹಣ ಪಾವತಿಸುವುದಕ್ಕಿಂತ ಮುಂಚೆ ನಿಗಧಿಪಡಿಸಲಾದ ಗುರಿಯಂತೆ ಯೋಜನೆಯನ್ನು ಪೂರ್ಣಗೊಳಿಸಿರುತ್ತಾರೆಯೇ : ಈ ಕಾಮಗಾರಿಯನ್ನು 3ನೇ ಪಕ್ಷಗಾರ (THIRD PARTY INSPECTION) ಸಮಿತಿಯಿಂದ ತಪಾಸಣೆ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಕಾಮಗಾರಿ ಕುರಿತು ಸದರಿ ಸಮಿತಿ ನೀಡಿರುವ ವರದಿಯಲ್ಲಿನ ಅಂಶಗಳೇನು ? | ಕಾಮಗಾರಿ ನಿರ್ವಹಿಸಿದ ನಂತರ ಮೆ|| ಎಲ್ & ಟಿ ಲಿಮಿಟೆಡ್ ರವರು ಬಿಲ್ಲನ್ನು ತಯಾರಿಸಿ ಡಿಬಿಓಇ 3ನೇ ಪಕ್ಷಗಾರ (Third Party Inspection) ರವರು ಕರಾರಿನ ನಿಯಮಾನುಸಾರ ಪರಿಶೀಲಿಸಿ ಪಾವತಿಗಾಗಿ ಶಿಫಾರಸ್ಸು ಮಾಡುತ್ತಾರೆ. ಡಿಬಿಓಇ ರವರ ವರದಿಯ ತಪಾಸಣೆಯಂತೆ ಕಾಮಗಾರಿ ವಿಳಂಬಕ್ಕೆ ಇದುವರೆಗೆ ರೂ.25.92 ಕೋಟಿ ದಂಡವಿಧಿಸಲಾಗಿದೆ.<br><br>ಗುತ್ತಿಗೆದಾರರಾದ ಮೆ|| ಎಲ್ & ಟಿ ಲಿಮಿಟೆಡ್ ರವರಿಗೆ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.<br><br>1. ನಿರ್ಮಾಣ ಕಾಮಗಾರಿಗೆ : ರೂ. 91.61 ಕೋಟಿ<br>2. ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ : ರೂ. 37.53 ಕೋಟಿ |

ಕಡತ ಸಂಖ್ಯೆ:ನಅಇ 20 ಪಿಆರ್‌ಜೆ 2024

12/02/2024

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು